


## ಸುದ್ದಿ ಸಂಚಯ






# 'ಯುವ ಭಾರತ ಜಾಗೃತವಾಗಲಿ!'

## ಕೊಯಮತ್ತೂರಿನಲ್ಲಿ ದಕ್ಷಿಣಭಾರತ ಪ್ರಾದೇಶಿಕ ಯುವ ಸಮ್ಮೇಳನ – ೨೦೧೩

ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮೋತ್ಸವದ ಅಂಗವಾಗಿ ೨೦೧೩ರ ನವೆಂಬರ್ ೨೮ ರಿಂದ ೩೦ರ ವರೆಗೆ – **'ಯುವ ಭಾರತ! ಜಾಗೃತವಾಗಲಿ!'** ಎಂಬ ಶೀರ್ಷಿಕೆಯ ಅಡಿಯಲ್ಲಿ 'ದಕ್ಷಿಣ ಭಾರತ ಪ್ರಾದೇಶಿಕ ಯುವ ಸಮ್ಮೇಳನ'ವನ್ನು ಕೊಯಮತ್ತೂರಿನ ರಾಮಕೃಷ್ಣ ಮಿಷನ್ ವಿದ್ಯಾಲಯದ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಈ ಬೃಹತ್ ಆವಾಸಿ ಸಮಾವೇಶದಲ್ಲಿ ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಿಂದ ಭಾಗವಹಿಸಿದ ೧,೨೦೦ಕ್ಕೂ ಹೆಚ್ಚು ಯುವಪ್ರತಿನಿಧಿಗಳು ಭಾಗವಹಿಸಿದ್ದರು.

ಮೂರು ದಿನಗಳ ಈ ಆವಾಸಿ ಶಿಬಿರದಲ್ಲಿ ಮಾರ್ಗದರ್ಶಿತ ಧ್ಯಾನ–ಪ್ರಾರ್ಥನೆ ಮತ್ತು ಯೋಗ, ಮೌಲಿಕ ವಿಷಯಗಳ ಕುರಿತು ನುರಿತ ಪ್ರವೀಣರಿಂದ ಪ್ರವಚನಗಳು, ಪ್ರಸ್ತುತ ಸಾಮಾಜಿಕ ವಿಷಯಗಳ ಕುರಿತು ಸಮೂಹ ಚರ್ಚೆಗಳು, ಹಲವಾರು ಗುಂಪುಗಳ ನಾಯಕರಿಂದ ಚರ್ಚೆ ಮತ್ತು ಸೇವಾವ್ರತ ಸ್ವೀಕಾರ – ಇವೇ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು. ಇವೆಲ್ಲವೂ ಈ ಯುವಸಮಾವೇಶವನ್ನು ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡಿದ್ದವು. ಸಾಮಾಜಿಕ ಮಹತ್ವವುಳ್ಳ ಚಲನಚಿತ್ರದ ಪ್ರದರ್ಶನ ಮತ್ತು ಸಂಜೆಗಳಲ್ಲಿ ನಡೆದ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಈ ಸಮಾವೇಶದ ವಿಶಿಷ್ಟ ಆಕರ್ಷಣೆಯಾಗಿದ್ದವು. ಕಡೆಯದಾಗಿ, ಶ್ರೀ ಎ.ಎಸ್. ರಾಮ್ ಅವರಿಂದ ವಾದ್ಯಗೋಷ್ಠಿ ಏರ್ಪಾಡಾಗಿತ್ತು. ಈ ಯುವ ಅಧಿವೇಶನದ ಸಂಪನ್ಮೂಲ ವ್ಯಕ್ತಿಗಳು ವಿವಿಧ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಅವರೆಂದರೆ, ಸ್ವಾಮಿ ಅಭಿರಾಮಾನಂದಜಿ, ಸ್ವಾಮಿ ನಿಖಿಲೇಶ್ವರಾನಂದಜಿ, ಸ್ವಾಮಿ ಆತ್ಮಪ್ರಿಯಾನಂದಜಿ, ಸ್ವಾಮಿ ಬೋಧಮಯಾನಂದಜಿ, ಸ್ವಾಮಿ ಆತ್ಮಶ್ರದ್ಧಾನಂದಜಿ, ಡಾ. ಗುರುರಾಜ ಕರ್ಜಗಿ, ಅರುಣಿಮಾ ಸಿನ್ಹಾ, ನಿವೇದಿತಾ ಭಿಡೆ, ಡಾ. ಬಿ.ಕೆ. ಕೃಷ್ಣರಾಜ ವನವಾರಯರ್, ಡಾ. ಟಿ.ಜಿ.ಕೆ. ಮೂರ್ತಿ ಮತ್ತು ನ್ಯಾಯಮೂರ್ತಿ ರಾಮಸುಬ್ರಮಣಿಯನ್.